**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 01 ಅಪ್ರಾ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ 06.08.2019.

**ಸುತ್ತೋಲೆ**

**ವಿಷಯ:** ಸಚಿವಾಲಯಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಸಹಿ ಮಾಡಿ ಸ್ಕ್ಯಾನ್ ಮಾಡಿದ (PDF ಮೂಲದಲ್ಲಿ) ಡಿಜಿಟಲ್ ರೂಪದಲ್ಲಿರುವ ಪತ್ರವನ್ನು ಇ-ಮೇಲ್ ಮೂಲಕ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 44 ಕತವ 2019, ದಿನಾಂಕ 12.04.2019.
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 44 ಕತವ 2019, ದಿನಾಂಕ 15.05.2019.
3. ಸಿಆಸು ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 44 ಕತವ 2019, ದಿನಾಂಕ 28.06.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಆದೇಶದಲ್ಲಿ, ಸಚಿವಾಲಯದಲ್ಲಿ ಇ-ಆಫೀಸ್ ಅನುಷ್ಠಾನಗೊಳಿಸುವ ಕುರಿತು ಕೆಲವು ಸೂಚನೆಗಳನ್ನು ನೀಡಿದ್ದು, ಸದರಿ ಸೂಚನೆಗಳ ಪೈಕಿ ಸಚಿವಾಲಯದ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳು ಸಹಿ ಮಾಡಿ ಸ್ಕ್ಯಾನ್ ಮಾಡಿರುವ (PDF ಮೂಲದಲ್ಲಿ) ಡಿಜಿಟಲ್ ರೂಪದಲ್ಲಿರುವ ಪತ್ರ / ಪ್ರಸ್ತಾವನೆಗಳನ್ನು ಸಚಿವಾಲಯದ ಸಂಬಂಧಪಟ್ಟ ಇಲಾಖೆಗೆ ಕಾಗದದ ಪ್ರತಿ ಕಳುಹಿಸುವ ಜೊತೆಗೆ ಇ-ಮೇಲ್ ಮೂಲಕವೂ ಕಳುಹಿಸತಕ್ಕದ್ದು ಅಥವಾ ಕ್ಷೇತ್ರ ಇಲಾಖೆಗಳು https//eoffice.karnataka.gov.in ನಲ್ಲಿ ನೊಂದಾಯಿಸಿಕೊಂಡಿದ್ದಲ್ಲಿ ಪತ್ರ / ಪ್ರಸ್ತಾವನೆಗಳನ್ನು ಇ-ಆಫೀಸ್ ಮೂಲಕ ಸಚಿವಾಲಯದ ಇಲಾಖೆಗಳಿಗೆ ಕಳುಹಿಸತಕ್ಕದ್ದು ಎಂದು ತಿಳಿಸುವುದರ ಜೊತೆಗೆ "ಇ-ಆಫೀಸ್"ನ ತಂತ್ರಾಂಶದ ಬಗ್ಗೆ ತಾಂತ್ರಿಕ ಸಲಹೆ ಸಹಕಾರಗಳನ್ನು ನೀಡುವ ಜಬಾಬ್ದಾರಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಕೇಂದ್ರದ "ಇ-ಆಫೀಸ್" ಯೋಜನಾ ಘಟಕವು ಹೊಂದಿರುತ್ತದೆಂದು ಸಹ ತಿಳಿಸಲಾಗಿದೆ.

ಉಲ್ಲೇಖ(2)ರ ಆದೇಶದಲ್ಲಿ, ದಿನಾಂಕ 01.07.2019ರಿಂದ ಜಾರಿಗೆ ಬರುವಂತೆ ಸಚಿವಾಲಯದ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳು ಸಹಿ ಮಾಡಿ ಸ್ಕ್ಯಾನ್ ಮಾಡಿರುವ (PDF ಮೂಲದಲ್ಲಿ) ಡಿಜಿಟಲ್ ರೂಪದಲ್ಲಿರುವ ಪತ್ರ / ಪ್ರಸ್ತಾವನೆಗಳನ್ನು ಸಚಿವಾಲಯದ ಸಂಬಂಧಪಟ್ಟ ಇಲಾಖೆಗೆ ಇ-ಮೇಲ್ ಮೂಲಕವೂ ಕಳುಹಿಸತಕ್ಕದ್ದು ಅಥವಾ ಕ್ಷೇತ್ರ ಇಲಾಖೆಗಳು https//eoffice.karnataka.gov.in ನಲ್ಲಿ ನೊಂದಾಯಿಸಿಕೊಂಡಿದ್ದಲ್ಲಿ ಪತ್ರ / ಪ್ರಸ್ತಾವನೆಗಳನ್ನು ಇ-ಆಫೀಸ್ ಮೂಲಕ ಸಚಿವಾಲಯದ ಇಲಾಖೆಗಳಿಗೆ ಕಳುಹಿಸುವುದು. ಭೌತಿಕ ರೂಪದಲ್ಲಿ ಪ್ರತಿಗಳನ್ನು ಕಳುಹಿಸತಕ್ಕದ್ದಲ್ಲ ಎಂದು ಸೂಚಿಸಲಾಗಿದೆ.

3536
21/8/19

21/8/19

...2

ಉಲ್ಲೇಖ(3)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ಇತ್ತೀಚಿನ ದಿನಗಳಲ್ಲಿ ಎಲ್ಲಾ ನಕ್ಷೆಗಳನ್ನು Autocad ಅಥವಾ ಅಂತಹುದೇ ಇತರೆ Software ಬಳಸಿ ತಯಾರಿಸಲಾಗುತ್ತದೆ. ನಕ್ಷೆಗಳು, ಇತ್ಯಾದಿಗಳು Soft Copy ಯಲ್ಲಿರುವಾಗ Zoom ಮಾಡುವುದು ಮತ್ತು ನೋಡುವುದು ಸುಲಭವಾಗುತ್ತದೆ. ಮುದ್ರಿತ ಪ್ರತಿಗಳನ್ನು ಸ್ಕ್ಯಾನ್ ಮಾಡುವ ಅಗತ್ಯವಿರುವುದಿಲ್ಲ. ನಕ್ಷೆಗಳು ಇತ್ಯಾದಿಗಳ Soft ಪ್ರತಿಗಳನ್ನು ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳು ತಮ್ಮ Digital ಸಹಿಯೊಂದಿಗೆ ಇಲಾಖೆಗೆ ಕಳುಹಿಸುವಂತೆ ಸೂಚಿಸಲು ತಿಳಿಸಲಾಗಿದೆ.

ಆದ್ದರಿಂದ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ನಗರ ಯೋಜನಾ ಪ್ರಾಧಿಕಾರಗಳು https//eoffice.karnataka.gov.in ನಲ್ಲಿ ನೊಂದಾಯಿಸಿಕೊಳ್ಳುವವರೆಗೆ, .ಸರ್ಕಾರಕ್ಕೆ ಸಲ್ಲಿಸುವ ಎಲ್ಲಾ ಪ್ರಸ್ತಾವನೆಗಳನ್ನು ಪ್ರಸ್ತುತ ಸಲ್ಲಿಸುತ್ತಿರುವ ಭೌತಿಕ ರೂಪದ ಜೊತೆಗೆ ಇ-ಮೇಲ್ ಮೂಲಕವೂ ಸಹ ಸಲ್ಲಿಸತಕ್ಕದ್ದು.

ಮುಂದುವರೆದು, ಭೂ ಉಪಯೋಗ ಬದಲಾವಣೆಗಳ ಪ್ರಸ್ತಾವನೆಗಳಲ್ಲಿನ ಎಲ್ಲಾ ನಕ್ಷೆಗಳನ್ನು Autocad ಅಥವಾ ಅಂತಹುದೇ ಇತರೆ Software ಬಳಸಿ ತಯಾರಿಸಿ, ನಕ್ಷೆಗಳು ಇತ್ಯಾದಿಗಳ Soft ಪ್ರತಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳು ತಮ್ಮ Digital ಸಹಿಯೊಂದಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ಈ ರೀತಿ ಪ್ರಾಧಿಕಾರಗಳಿಂದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದಲ್ಲಿ ಸ್ವೀಕೃತವಾದ ಭೂ ಉಪಯೋಗ ಪ್ರಸ್ತಾವನೆಗಳನ್ನು ಪರಿಶೀಲಿಸಿದ ನಂತರ, ಅಂತಹ ಪ್ರಸ್ತಾವನೆಗಳನ್ನು ಭೌತಿಕ ರೂಪದ ಜೊತೆಗೆ ಇ-ಮೇಲ್ / ಇ-ಆಫೀಸ್ ಮೂಲಕವೂ ಸಹ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಮೇಲೆ ತಿಳಿಸಿರುವಂತೆ ಇ-ಆಫೀಸ್‌ನಲ್ಲಿ ನೊಂದಾಯಿಸಿಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯೊಂದಿಗೆ ಮುಂದಿನ ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ;**

1. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು (ಬಿಡಿಎ ಹೊರತುಪಡಿಸಿ).
3. ಸದಸ್ಯ ಕಾರ್ಯದರ್ಶಿ/ಮುಖ್ಯಾಧಿಕಾರಿ, ರಾಜ್ಯದ ಎಲ್ಲಾ ಯೋಜನಾ ಪ್ರಾಧಿಕಾರಗಳು (ಬಿ.ಎಂ.ಆರ್.ಡಿ.ಎ ಹೊರತುಪಡಿಸಿ) ಮತ್ತು ಪುರಸಭಾ ಯೋಜನಾ ಪ್ರಾಧಿಕಾರಗಳು.

ಸಂ. ನಗ್ರಾಯೋ:ಸಿ(5):ಸುತ್ತೋಲೆ:3536/2019

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಕಛೇರಿ,
ಬಹುಮಹಡಿ ಕಟ್ಟಡ, 4ನೇ ಹಂತ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು.

**ದಿನಾಂಕ:** 17 SEP 2019

**ವಿಷಯ:** ಸರ್ಕಾರಕ್ಕೆ ಸಲ್ಲಿಸುವ ಪತ್ರ ಮತ್ತು ಪ್ರಸ್ತಾವನೆಗಳನ್ನು ಸ್ಕ್ಯಾನ್ ಮಾಡಿ ಪಿ.ಡಿ.ಎಫ್ ಮೂಲಕ ಇ-ಮೇಲ್ ನಲ್ಲಿ ಕಳುಹಿಸುವ ಬಗ್ಗೆ.

*******

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು, ಮೈಸೂರು ಮತ್ತು ಕಲಬುರಗಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು (ಬಿ.ಡಿ.ಎ. ಹೊರತುಪಡಿಸಿ) ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಸದಸ್ಯ ಕಾರ್ಯದರ್ಶಿ / ಮುಖ್ಯಾಧಿಕಾರಿ, ರಾಜ್ಯದ ಎಲ್ಲಾ ಯೋಜನಾ ಪ್ರಾಧಿಕಾರಗಳು (ಬಿ.ಎಂ.ಆರ್.ಡಿ.ಎ. ಹೊರತುಪಡಿಸಿ) ಮತ್ತು ಪುರಸಭೆ ಯೋಜನಾ ಪ್ರಾಧಿಕಾರಗಳು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
5. ಇಲಾಖೆಯ ಎಲ್ಲಾ ಶಾಖಾ ಕಛೇರಿಗಳಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
6. ಕೇಂದ್ರ ಕಛೇರಿಯ ಎಲ್ಲಾ ಪತ್ರಾಂಕಿತ ಅಧಿಕಾರಿಗಳಿಗೆ ಮಾಹಿತಿಗಾಗಿ ನೀಡಲಾಗಿದೆ.
7. ಕೇಂದ್ರ ಕಛೇರಿಯ ವ್ಯವಸ್ಥಾಪಕರು, ಅಧೀಕ್ಷಕರು, ಲೆಕ್ಕಾಧೀಕ್ಷಕರು ಮತ್ತು ಎಲ್ಲಾ ಸಿಬ್ಬಂದಿಗಳಿಗೆ ಮಾಹಿತಿಗಾಗಿ ನೀಡಲಾಗಿದೆ.
8. ಕಛೇರಿ ಪ್ರತಿ.

16/9/19

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ
16/9/19

17 Copy to doc C(5) / SL